**ಮಹೋತ್ಸವ** | **ಉಪ್ಪಿನ ಬೆಟಗೇರಿ ಗಂಡು ಮಕ್ಕಳ ಶಾಲೆಯ ಶತಮಾನೋತ್ತರ ಸುವರ್ಣ ಮಹೋತ್ಸವದಲ್ಲಿ ಪ್ರಹ್ಲಾದ ಜೋಶಿ**

# ಸಾವಿರಾರು ವಿದ್ಯಾರ್ಥಿಗಳ ಬದುಕಿಗೆ ಬೆಳಕಾದ ಕನ್ನಡ ಶಾಲೆ

• **ಕನ್ನಡಪ್ರಭ ವಾರ್ತೆ** ಧಾರವಾಡ

ಒಂದು ಸರ್ಕಾರಿ ಕನ್ನಡ ಮಾಧ್ಯಮ ಶಾಲೆಗೆ 157 ವರ್ಷ. ಬಹುಶಃ ಈ ಶಾಲೆ ಎಷ್ಟು ವಿದ್ಯಾರ್ಥಿಗಳನ್ನು ಸಮಾಜಕ್ಕೆ ಕೊಡುಗೆ ನೀಡಿದೆ ಎಂದರೆ ಅದು ಇತಿಹಾಸವೇ ಸರಿ ಎಂದು ಕೇಂದ್ರ ಸಚಿವ ಪ್ರಹ್ಲಾದ ಜೋಶಿ ಹೇಳಿದರು.

ತಾಲೂಕಿನ ಉಪ್ಪಿನಬೇಟಗೇರಿ ಸರ್ಕಾರಿ ಮಾದರಿ ಗಂಡು ಮಕ್ಕಳ ಪ್ರಾಥಮಿಕ ಶಾಲೆ ಆವರಣದಲ್ಲಿ ಶಾಲೆಯ ಶತಮಾನೋತ್ತರ ಸುವರ್ಣ ಮಹೋತ್ಸವಕ್ಕೆ ಚಾಲನೆ ನೀಡಿ ಮಾತನಾಡಿದರು.

ಸಾವಿರಾರು ವಿದ್ಯಾರ್ಥಿಗಳ ಬಾಳಿಗೆ ಈ ಶಾಲೆ ನೆರಳಾಗಿದ್ದು, ಶಾಲಾ ಅಭಿವೃದ್ಧಿಗೆ ಬೇಕಾದ ಸಹಕಾರ ಒದಗಿಸಲಾಗುವುದು. ರಾಷ್ಟ್ರೀಯಶಿಕ್ಷಣನೀತಿಯಲ್ಲಿವಿದ್ಯಾರ್ಥಿಗಳಿಗೆ ಸಮಗ್ರ ಕೌಶಲ್ಯ ಬೆಳವಣಿಗೆ ಅವಶ್ಯಕತೆ ಇರುವ ಅಂಶಗಳನ್ನು ಅಳವಡಿಕೆ ಮಾಡಿದೆ. ಜಗತ್ತಿನಲ್ಲಿ ಹೆಚ್ಚು ಯುವ ಸಮುದಾಯವನ್ನು ಹೊಂದಿರುವ ದೇಶ ಭಾರತವಾಗಿದೆ.



ಶಾಲೆಯ ಶತಮಾನೋತ್ತರ ಸುವರ್ಣ ಮಹೋತ್ಸವದಲ್ಲಿ ಭಾಗವಹಿಸಿದ ಕೇಂದ್ರ ಸಚಿವ ಪ್ರಹ್ಲಾದ ಜೋಶಿ, ವಿಪ ಸಭಾಪತಿ ಬಸವರಾಜ ಹೊರಟ್ಟಿ ಹಾಗೂ ಇತರೆ ಗಣ್ಯರು.

ದೇಶದಲ್ಲಿ ಶೇ. 65ರಷ್ಟು ಯುವಜನರು ಇದ್ದಾರೆ. ನಮ್ಮ ದೇಶದಲ್ಲಿವೃದ್ಧರೂ ದುಡಿಮೆ ಮಾಡುತ್ತಾರೆ. ದೇಶದ ಬೆಳವಣಿಗೆಗೆ ವಿದ್ಯಾರ್ಥಿಗಳಲ್ಲಿ ಕೌಶಲ್ಯವನ್ನು ಬೆಳೆಸಬೇಕಾಗಿದೆ. ಅದಕ್ಕಾಗಿಯೇ ಎನ್ಇಪಿ ಅಳವಡಿಕೆ ಮಾಡಿಕೊಳ್ಳಲಾಗಿದೆ ಎಂದರು.

ನಮ್ಮ ದೇಶದಲ್ಲಿ ಅನೇಕ ಉನ್ನತ ವಿಶ್ವವಿದ್ಯಾಲಯಗಳು ಇದ್ದವು. ನಳಂದ, ತಕ್ಷಶಿಲಾ, ವಾರಾಣಸಿ ಇವು ಜಗತ್ತಿನ ಶ್ರೇಷ್ಠ ವಿಶ್ವವಿದ್ಯಾಲಯಗಳಾಗಿದ್ದವು. ಕೇಂದ್ರ ಸರ್ಕಾರ ಬಡವರ ಹಿತಕ್ಕಾಗಿ, ದೇಶದ ಸುರಕ್ಷತೆಗಾಗಿ ಮತ್ತು ಭ್ರಷ್ಟಾಚಾರ ಮುಕ್ತ ಆಡಳಿತ ನೀಡಿದೆ. ಹರ್ ಘರ್ ಜಲ್ ಎಂಬ ಯೋಜನೆಯು ಇಡೀ ಜಗತ್ತಿನ ಗಮನ ಸೆಳೆಯುತ್ತಿದೆ. ಪ್ರಪಂಚದಲ್ಲಿ ಇತರೆ ದೇಶಗಳನ್ನು ನೋಡಿದರೆ ಕೋವಿಡ್ ನಂತರ ಆರ್ಥಿಕತೆ ದಾರಿ ತಪ್ಪಿದೆ. ಆದರೆ, ನಮ್ಮ ದೇಶವು ಆರ್ಥಿಕತೆಯಲ್ಲಿ ಬ್ರಿಟನ್ ಅನ್ನು ಹಿಂದಿಕ್ಕಿ ಮುಂದೆ ಸಾಗುತ್ತಿದೆ ಎಂದರು.

ಉಪ್ಪಿನ ಬೆಟ್ಟಗೇರಿ ಗ್ರಾಮದಲ್ಲಿ ₹15 ಕೋಟಿ ಅನುದಾನದ ಕೆಲಸಗಳು ನಡೆಯುತ್ತಿವೆ. ಧಾರವಾಡ ಲೋಕಸಭಾ ವ್ಯಾಪ್ತಿಯ ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ನಾವು ಬದ್ಧರಾಗಿರುತ್ತೇವೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿದ್ದ ವಿಧಾನಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಮಾತನಾಡಿ, ಉಪ್ಪಿನ ಬೆಟಗೇರಿ ಈ ಶಾಲೆಯು ದೇಶಕ್ಕೆ ಮತ್ತು ನಾಡಿಗೆ ಉತ್ತಮ ಕಾಣಿಕೆ ನೀಡಿದೆ. ಮುಖ್ಯವಾಗಿ ಹೆಣ್ಣು ಮಕ್ಕಳು ಶಿಕ್ಷಣ ಪಡೆಯಬೇಕಿತ್ತು. ಇನ್ನು ದೇಶ ತುಂಬಾ ಪ್ರಗತಿ ಕಾಣುತಿತ್ತು. ಸಾವಿತ್ರಿಬಾಯಿ ಅವರಂತೆ ಉತ್ತಮ ಶಿಕ್ಷಕಿಯಾಗಿ ಮಕ್ಕಳ ಭವಿಷ್ಯ ಚೆನ್ನಾಗಿರುತ್ತದೆ. 157 ವರ್ಷ ಪೂರೈಸಿದ ಸವಿ ನೆನಪಿಗಾಗಿ ಮತ್ತೊಂದು ಕಟ್ಟಡವನ್ನು ನಿರ್ಮಾಣ ಮಾಡೋಣ, ಈ ಶಾಲೆಯ ದೊಡ್ಡ ಸಾಧನೆ ಇದು. ಶಾಲೆಯಲ್ಲಿ ತಂದೆ, ತಾಯಿ, ಕುಟುಂಬ, ಸಮಾಜ ಹಾಗೂ ಸಂಸ್ಕಾರದ ಬಗ್ಗೆ ಕಲಿಸಬೇಕು. ಮಕ್ಕಳು ರ್ಯಾಂಕ ಬರುವುದು ಮುಖ್ಯವಲ್ಲ ಸಂಸ್ಕಾರ ಕಲಿಯುದು ಮುಖ್ಯ. ಸಂಸ್ಕಾರ ಮತ್ತು ಶಿಕ್ಷಣ ಜೀವನಕ್ಕೆ ಆಧಾರ. ರಾಜ್ಯಕ್ಕೆ ಉತ್ತಮ ಮಾದರಿ ಶಾಲೆ ಆಗಲಿ ಎಂದು ಹಾರೈಸಿದರು.

ಬಯಲು ಸೀಮೆ ಪ್ರದೇಶಾಭಿವೃದ್ಧಿ ಮಂಡಳಿ ಅಧ್ಯಕ್ಷ ತವನಪ್ಪ ಅಷ್ಟಗಿ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಶಾಸಕ ಅಮೃತ ದೇಸಾಯಿ, ಮಾಜಿ ಶಾಸಕಿ ಸೀಮಾ ಮಸೂತಿ ಮತ್ತು ಶಿಕ್ಷಣ ಇಲಾಖೆ ಅಧಿಕಾರಿಗಳಾದ ಸುರೇಶ ಹುಗ್ಗಿ, ಗಿರೀಶ ಪದಕಿ, ಸ್ಥಳೀಯ ಮೂರು ಸಾವಿರಮಠದ ವಿರೂಪಾಕ್ಷೇಶ್ವರ ಸ್ವಾಮೀಜಿ, ಎಸ್‌ಡಿಎಂಸಿ ಅಧ್ಯಕ್ಷ ಸಿ.ವಿ.ಆರ್. ಪರಾಂಡೆ, ಸಿ.ಬಿ. ಮಸೂತಿ ಮತ್ತಿತರರು ಇದ್ದರು.

ಕನ್ನಡಪ್ರಭ Mon, 20 March 2023
https://kpepaper.asianetnews.com/c/71963911